ಏಳುಕಟ್ಟಿನ ಹುಲ್ಲಿನ ಹೊರೆ ಹಾಗೂ ಸೌದೆ ಹೊರೆ ಒಬ್ಬನೇ ಎತ್ತಿ ಹೊತ್ತುಕೊಳ್ಳಲು ಆಗುವುದಿಲ್ಲ. ಅದನ್ನು ಹೊರಿಸಲು ನೀವೇ ಬರಬೇಕು. ಆದರೆ ಸೀಗೆ ಎಲೆಯ ಊಟಕ್ಕೆ ಬದಲಾಗಿ ಒಂದು ಬಾಳೆ ಎಲೆಯ ತುಂಬ ಊಟ ಹಾಕಬೇಕು. ನೀವಾಗೆ ಮೊದಲು ಬಿಟ್ಟು ಹೋಗು ಎಂದರೆ, ಮೀಸೆ ತಲೆ, ಬೋಳಿಸಿಕೊಳ್ಳುವುದರ ಜೊತೆಗೆ ಮೂವತ್ತು ಕಾಸನ್ನು ದಂಡವನ್ನಾಗಿ ಕೊಡಬೇಕು. ನಾನಾಗೆ ಬಿಟ್ಟು ಹೋಗುತ್ತೇನೆ ಎಂದರೆ, ಒಂದು ತಿಂಗಳು ಕಾಸಿಲ್ಲದೆ ಬಿಟ್ಟಿ ಕೆಲಸ ಮಾಡಿ ಹೋಗುತ್ತೇನೆ. ಆಗಬಹುದಾ?' ಎಂದ. ಅಯ್ನೋರು 'ಊಟವಲ್ಲವೆ? ಹೋಗಲಿ! ಇನ್ನು ನಾವಾಗೆ ಕೆಲಸವನ್ನಂತೂ ಬಿಡಿಸುವುದಿಲ್ಲ' ಎಂದು ಒಪ್ಪಿಕೊಂಡರು.

ಹರಿ ಊರಿಗೆ ಮರಳಿದ. ನಾರಾಯಣ ಕೆಲಸಕ್ಕೆ ತೊಡಗಿದ. ಮೊದಲು, ಕೇವಲ ಬೆರಳು ಗಾತ್ರದ ಮೂರೇ ಮೂರು ಉದ್ದದ ಕಡ್ಡಿಗಳನ್ನು ಜೋಡಿಸಿ ಅದಕ್ಕೆ ಏಳು ಕಟ್ಟು ಹಾಕಿ ಬಿಗಿದ. ಅದನ್ನು ಒಂದು ನೊದೆಹುಲ್ಲಿನ ಗುತ್ತಿಯ ಮೇಲೆ ಇಟ್ಟು, ಸೌದೆಹೊರೆಗೆ ನೊದೆಹುಲ್ಲಿನಿಂದ ಕಟ್ಟು ಹಾಕಿದ. ಹೊರೆ ಹೊರಿಸಲು ಬಂದ ಅಯ್ನೋರು 'ಸೌದೆ ಹೊರೆ ಇಷ್ಟು ಸಣ್ಣ ಇದೆಯಲ್ಲಾ!' ಎಂದು ತಗಾದೆ ತೆಗೆದರು. ಆಗ ನಾರಾಯಣ 'ಸ್ವಾಮಿ, ನೋಡಲು ಸಣ್ಣಗಿದೆ ಅಷ್ಟೆ. ಅದೆಷ್ಟು ಭಾರ ಇದೆ ಎಂದು ನೀವೇ ಹೊರಿಸುತ್ತೀರಲ್ಲ ಆಗ ನೋಡಿ. ಅಲ್ಲದೆ ನಿಮ್ಮ ಷರತ್ತಿನಂತೆ ಏಳು ಕಟ್ಟುಗಳಂತೂ ಇದ್ದೇ ಇವೆ' ಎಂದ. ಹೊರೆಯನ್ನು ಎತ್ತಲು ಮುಂದಾದ ಅಯ್ನೋರಿಗೆ ಅದನ್ನು ಹೊರಿಸಲು ಆಗಲೇ ಇಲ್ಲ! ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದೆ, 'ಏನಾದರೂ ಮಾಡಿಕೊಂಡು ಹಾಳಾಗಿ ಹೋಗು! ಮನೆಗೆ ಸೌದೆ ಬಂದು ಬೀಳಬೇಕು ಅಷ್ಟೆ!' ಎಂದು ರೇಗಿ ಹೊರಟೇ ಹೋದರು. ಹುಲ್ಲಿನ ಹೊರೆಯನ್ನೂ ನಾರಾಯಣ ಹಾಗೆ ಮಾಡಿದ. ಒಂದು ತೋಳಿನ ಗಾತ್ರಕ್ಕೆ ಮಾತ್ರ ಹುಲ್ಲನ್ನು ಉದ್ದವಾಗಿ ಜೋಡಿಸಿ, ಏಳು ಕಟ್ಟು ಹಾಕಿ ಕಟ್ಟಿ, ಅದನ್ನು ನೊದೆಹುಲ್ಲಿನ ಗುತ್ತಿಗೆ ನಡುವೆ ಇಟ್ಟು ಭದ್ರಪಡಿಸಿ 'ಬನ್ನಿ ಸ್ವಾಮಿ, ಹುಲ್ಲಿನ ಹೊರೆ ಹೊರಿಸಿ' ಎಂದ. 'ಹುಲ್ಲಲ್ಲವೆ? ನೋಡೋಣ' ಎಂದು ಬಂದು ಹೊರೆ ಹೊರಿಸಲು ಹೊರಟ ಅಯ್ನೋರು ಸೋತುಹೋದರು. ಅವರು ಅತ್ತ ಹೋದ ಮೇಲೆ, ನಾರಾಯಣ ನೊದೆಹುಲ್ಲಿನ ಗಂಟು ಬಿಡಿಸಿ ಅಷ್ಟೇ ಹುಲ್ಲನ್ನು ತಂದು ಮನೆಗೆ ಹಾಕಿದ. ಕೊನೆಯಲ್ಲಿ ಬಾವಿಯಿಂದ ನೀರು ಸೇದಿ ಹಂಡೆಗೆ ತುಂಬಿಸಲಾರಂಭಿಸಿದ. ಹೋಗಿ ಒಂದು ಬಿಂದಿಗೆ ತರುವಷ್ಟರಲ್ಲಿ ನೀರು ಖಾಲಿಯಾಗಿರುತ್ತದಲ್ಲಾ ಹೇಗೆ ಎಂದು ಬಚ್ಚಲಿನ ಹಿಂದೆ ಮುಂದೆ ನೋಡಿದ. ಹಂಡೆಗೆ ಕೊಳಾಯಿ ಜೋಡಿಸಿದ್ದು ಗೊತ್ತಾಯಿತು. ಅಲ್ಲಿಂದ ಹೊಳೆಗೆ ಬಂದ ಆತ, ಒಂದು ಕಪ್ಪೆಯನ್ನು ಹಿಡಿದು ತಂದು ಅದನ್ನು ಹಂಡೆಗೆ ಹಾಕಿದ, ಹಂಡೆಯ ಅಡಿಯಲ್ಲಿ ಸ್ವಲ್ಪ ಬೆಂಕಿ ಹಾಕಿದ. ಆ ಬಿಸಿಯಿಂದ ತಪ್ಪಿಸಿಕೊಳ್ಳಲು ಕಪ್ಪೆ ಕೊಳಾಯಿಯಲ್ಲಿ ನುಗ್ಗಿತು. ಆದರೆ, ಕೊಳಾಯಿ ಚಿಕ್ಕದಿದ್ದರಿಂದ ನಡುವೆ ಸಿಕ್ಕಿ ಹಾಕಿಕೊಂಡಿತು. ನಾರಾಯಣ ಈಗ ಬಾವಿಯಿಂದ ನೀರು ಸೇದಿ ತುಂಬಿಸಿದ. ಹಂಡೆ ತುಂಬಿದರೂ ಕೊಳಾಯಿಯಲ್ಲಿ ಹಿತ್ತಲಿಗೆ ನೀರು ಬರದಿದ್ದಕ್ಕೆ ಯಜಮಾನತಿ ಸೋಜಿಗಪಟ್ಟರೂ ತೋರಿಸಿಕೊಳ್ಳಲಿಲ್ಲ. ನಾರಾಯಣ 'ಅಮ್ಮ, ಮೂರೂ ಕೆಲಸ ಮಾಡಿದ್ದೇನೆ. ಇನ್ನು ಊಟ ಹಾಕಿ' ಎಂದು ಒಂದು ದೊಡ್ಡ ಮಾರುದ್ದದ ಬಾಳೆ ಎಲೆ ತಂದು ಹರಡಿಕೊಂಡು ಊಟಕ್ಕೆ ಕೂತ. ಮನೆಯಲ್ಲಿ ಮಾಡಿದ್ದ ಅಡುಗೆಯನ್ನೆಲ್ಲಾ ಬಡಿಸಿದರೂ ಅದು ತುಂಬಲಿಲ್ಲ. ನಾರಾಯಣ 'ಹೋಗಲಿ ಬಿಡಿ ಅಮ್ಮ. ಇಷ್ಟೇ ಸಾಕು' ಎಂದು ಎಲ್ಲವನ್ನೂ ಪಟ್ಟಾಗಿ ಹೊಡೆದು, ಅಂದಿನ ಕೂಲಿ ಒಂದು ಕಾಸು ತೆಗೆದುಕೊಂಡು ಹೊರಟ.

ದಿನಗಳು ಕಳೆದಂತೆ ನಾರಾಯಣನ ಕಾಟ ಅಯ್ನೋರಿಗೆ ತಡೆಯಲಾಗಲಿಲ್ಲ. 'ಏನಾದರೂ